ಪ್ರವಾಸೋದ್ಯಮ ಇಲಾಖೆಯ ಹೋಟೆಲ್ ಉದ್ದಿಮೆದಾರರಿಗೆ ಸಹಾಯಧನ ನೀಡುವ ಬಗ್ಗೆ.

ಸಂಖ್ಯೆ : 56 (15) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ)

ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ ಪಡೆದ ಹೋಟೆಲ್ ಉದ್ದಿಮೆದಾರರಿಗೆ ಸರ್ಕಾರದಿಂದ ನೀಡುವ ಸಹಾಯಧನ ಎಂದಿನಿಂದ ಬಾಕಿ ಎಷ್ಟು ಇರುತ್ತದೆ.

ಆ) ಬಾಕಿಯಿರುವ ಸಹಾಯಧನವನ್ನು ಕೂಡಲೇ ನೀಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಿ.ಶ್ರೀರಾಮುಲು

ಅ) ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ ಪಡೆದ ಹೋಟೆಲ್ ಉದ್ದಿಮೆದಾರರಿಗೆ ಸರ್ಕಾರದಿಂದ ನೀಡಬೇಕಾದ ಸಹಾಯಧನ 1-5-2001 ರಿಂದ 188 ಅರ್ಜಿಗಳು ಬಾಕಿ ಇರುತ್ತವೆ. ಇವುಗಳಿಗೆ ಅಂದಾಜು ರೂ. 27.00 ಕೋಟಿ ರೂಪಾಯಿಗಳು ಅನುದಾನ ಅಗತ್ಯವಿರುತ್ತದೆ.

ಆ) ಪ್ರಸ್ತುತ ಸಾಲಿನಲ್ಲಿ ಸಹಾಯಧನ ವಿತರಣೆಗಾಗಿ 6.00 ಕೋಟಿ ರೂಪಾಯಿಗಳ ಅನುದಾನವನ್ನು ಆಯವ್ಯಯದಲ್ಲಿ ಸರ್ಕಾರವು ಒದಗಿಸಿರುತ್ತದೆ. ಬಾಕಿ ಮೊತ್ತವನ್ನು ಪಾವತಿಸಲು ಹೆಚ್ಚುವರಿ ಅನುದಾನವನ್ನು ಕೋರಲಾಗುತ್ತಿದ್ದು, ಅನುದಾನ ದೊರೆತ ನಂತರ ಸಹಾಯಧನವನ್ನು ಬಿಡುಗಡೆ ಮಾಡಲು ಕ್ರಮ

ಕೈಗೊಳ್ಳಲಾಗುವುದು.

ಪ್ರಶ್ನೆ ಸಂಖ್ಯೆ : 57 (215) ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್)

ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಲಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಪ್ರವಾಸೋದ್ಯಮ ನೀತಿಗಳನ್ನು ಘೋಷಿಸಲಾಗಿದೆ. ಪ್ರಸಕ್ತ ನೂತನ ಪ್ರವಾಸೋದ್ಯಮ ನೀತಿಯಲ್ಲಿ ಅಳವಡಿಸಲಾಗಿರುವ ವಿಶೇಷಗಳೇನು;

ಆ) ನೀತಿ ಘೋಷಣೆಯನ್ನು ಜಾರಿಗೆ ರುವಲ್ಲಿ ಯೋಜಿತ ಹಾಗೂ ದೂರದೃಷ್ಟಿಯುಳ್ಳ ಕ್ರಿಯಾ ಯೋಜನೆಯನ್ನು ರೂಪಿಸಗೆ ಇರುವುದರಿಂದ ಅನುಷ್ಠಾನಗೊಳ್ಳುವಲ್ಲಿನ ಅವ್ಯವಸ್ಥೆಯನ್ನು ಸರ್ಕಾರ ಗಮನಿಸಿದೆಯೇ;

ಇ) ರಾಜ್ಯದ ಮೂರು ಕರಾವಳಿ ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚಿನ ಪ್ರವಾಸೋದ್ಯಮದ ಅವಕಾಶವಿದ್ದರೂ ಈ ತನಕವೂ ನಿರೀಕ್ಷಿತ ರೀತಿಯಲ್ಲಿ ಅಭಿವೃದ್ಧಿ ಪಡಿಸದೆ ಇರಲು ಕಾರಣಗಳೇನು;

ಈ) ಗೋವಾ ರಾಜ್ಯ ಮಾದರಿಯಲ್ಲಿ ಈ ಜಿಲ್ಲೆಗಳಲ್ಲಿ ಪ್ರವಾಸೋದ್ಯಮವನ್ನು ಬಲಪಡಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಬಿ.ಶ್ರೀರಾಮುಲು

ಅ) ಪ್ರವಾಸೋದ್ಯಮ ಇಲಾಖೆಯು 2002 ರಿಂದ 2007ಕ್ಕೆ ಅನ್ವಯಿಸುವಂತೆ ಪ್ರವಾಸೋದ್ಯಮ ನೀತಿಯನ್ನು ಘೋಷಿಸಲಾಗಿತ್ತು. ಸದರಿ ನೀತಿಯ ದಿನಾಂಕ : 31-05-2007ಕ್ಕೆ ಮುಕ್ತಾಯಗೊಂಡಿರುತ್ತದೆ.

ಪ್ರಸಕ್ತ ನೂತನ ಕರಡು ಪ್ರವಾಸೋದ್ಯಮ ನೀತಿಯು ಪರಿಶೀಲನೆಯಲ್ಲಿದೆ. ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯ ಕೋರಲಾಗಿದ್ದು, ಅಭಿಪ್ರಾಯ